ಕರ್ನಾಟಕ ಸರ್ಕಾರ

ಆರ್‌ಡಿ ೨೦ ಸಮಿತಿ ೨೦೦೮

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:೨೨.೧.೨೦೦೮.

## ಸುತ್ತೋಲೆ.

ವಿಷಯ:-ಸರ್ಕಾರದ ಎಲ್ಲಾ ವಾಹನಗಳ ನೋಂದಣಿ ಸಂಖ್ಯೆಯನ್ನು ಆಂಗ್ಲ ಭಾಷೆಯೊಂದಿಗೆ ಕನ್ನಡ ಭಾಷೆಯಲ್ಲಿಯೂ ಕಡ್ಡಾಯವಾಗಿ ಬರೆಸುವ ಬಗ್ಗೆ.

* * * * *

ಕನ್ನಡವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಕರ್ನಾಟಕ ಸರ್ಕಾರವು ಸರ್ಕಾರಿ ವಾಹನಗಳ ಮೇಲೆ ಕನ್ನಡ ಅಕ್ಷರ ಮತ್ತು ಕನ್ನಡ ಅಂಕಿಗಳನ್ನು ಕಡ್ಡಾಯವಾಗಿ ಬಳಸಬೇಕೆಂದು ಹೊರಡಿಸಿರುವ ಆದೇಶಗಳು ಬಹುತೇಕ ಇದುವರೆಗೂ ಜಾರಿಯಾಗದಿರುವುದನ್ನು ಸರ್ಕಾರವು ಗಂಭೀರವಾಗಿ ಗಮನಿಸಿದೆ. ಸರ್ಕಾರದ ಎಲ್ಲಾ ವಾಹನಗಳ ನೋಂದಣಿ ಸಂಖ್ಯೆಯನ್ನು ಆಂಗ್ಲ ಭಾಷೆಯೊಂದಿಗೆ ಕನ್ನಡ ಭಾಷೆಯಲ್ಲಿಯೂ ಕಡ್ಡಾಯವಾಗಿ ಬರೆಸಬೇಕೆಂದು ಸರ್ಕಾರಿ ಸುತ್ತೋಲೆ ಸಂಖ್ಯೆ: ಡಿ.ಪಿ.ಎ.ಆರ್ ೧೭೪ ಕೆಓಎಲ್ ೨೦೦೦ ದಿನಾಂಕ:೧೮.೦೮.೨೦೦೦ ಮತ್ತು ಸಾರಿಗೆ ಆಯುಕ್ತರ ಸುತ್ತೋಲೆ ಸಂಖ್ಯೆ: ನೋಂದಣಿ ೨/ವೈನ/೭೮/೨೦೦೦-೦೧ ದಿನಾಂಕ:೨೧.೮.೨೦೦೦ರಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ. ಆದರೂ ಸಹಾ, ಸರ್ಕಾರದ ವಾಹನಗಳಲ್ಲಿ ಕನ್ನಡ ಅಕ್ಷರ ಮತ್ತು ಅಂಕಿಗಳನ್ನು ಬಳಸದಿರುವುದರಿಂದ ಅನುಷ್ಠಾನ ಮಾಡುವ ಅಧಿಕಾರಿಗಳಿಂದಲೇ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿರುವುದು ಖಚಿತವಾಗಿದೆ. ಸರ್ಕಾರದ ಆದೇಶಗಳು ೨೦೦೦ ರಿಂದ ೨೦೦೮ ರವರೆಗೂ ನಿರಂತರವಾಗಿ ಉಲ್ಲಂಘನೆಯಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ಸರ್ಕಾರಿ ಅಧಿಕಾರಿಗಳು ಸರ್ಕಾರಿ ಆದೇಶಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಉದಾಸೀನತೆಯನ್ನು ತೋರಿಸುತ್ತಿರುವುದಾಗಿ ಜನಸಾಮಾನ್ಯರು ಸಹಾ ಇದರ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಿರುವುದಾಗಿ 'ಮಾನ್ಯ ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ' ಇವರು ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

ಈ ಹಿನ್ನಲೆಯಲ್ಲಿ ಮೇಲೆ ಉಲ್ಲೇಖಿಸಲಾದ ಸುತ್ತೋಲೆಗಳಲ್ಲಿನ ಎಲ್ಲಾ ಸೂಚನೆಗಳನ್ನು ಕಟ್ಟು-ನಿಟ್ಟಾಗಿ ಜಾರಿಗೆ ತಂದು ಕನ್ನಡ ಭಾಷೆಯ ಬಳಕೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಎಲ್ಲಾ ವಾಹನಗಳ ನೋಂದಣಿ ಸಂಖ್ಯೆಯನ್ನು ಆಂಗ್ಲ ಭಾಷೆಯೊಂದಿಗೆ ಕನ್ನಡ ಅಕ್ಷರ ಮತ್ತು ಅಂಕಿಗಳಲ್ಲಿಯೂ ಕಡ್ಡಾಯವಾಗಿ ಬರೆಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದೆಂದು ಸಹ ತಿಳಿಸಲಾಗಿದೆ.

(ಡಿ.ತಂಗರಾಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

..................

ರವರಿಗೆ,

೧.ಎಲ್ಲಾ ಪ್ರಾದೇಶಿಕ ಆಯುಕ್ತರು.
೨.ಆಯುಕ್ತರು ಭೂ ಮಾಪನಾ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಕೆ.ಆರ್, ವೃತ್ತ, ಬೆಂಗಳೂರು.
೩.ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಚಾಮರಾಜ ಪೇಟೆ ಬೆಂಗಳೂರು.
೪.ನೋಂದಣಿ ಮಹಾ ಪರೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಶಿಂಷಾಭವನ, ನಂ.೭.೨೦, ೪೬ನೇ ಅಡ್ಡರಸ್ತೆ, ೬ನೇ ಬ್ಲಾಕ್, ಜಯನಗರ, ಸಂಗಮ್ ಸರ್ಕಲ್ ಹತ್ತಿರ, ಬೆಂಗಳೂರು.
೫.ಎಲ್ಲಾ ಜಿಲ್ಲಾಧಿಕಾರಿಗಳು,
೬.ಎಲ್ಲಾ ಉಪ ವಿಭಾಗಾಧಿಕಾರಿಗಳು/ಎಲ್ಲಾ ತಹಸೀಲ್ದಾರರು

ಪ್ರತಿಯನ್ನು:-
೧.ಮಾನ್ಯ ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ ಬೆಂಗಳೂರು.
೨.ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು ವಿಧಾನ ಸೌಧ. ಬೆಂಗಳೂರು.
೩..ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳವರಿಗೆ, ಕಂದಾಯ ಇಲಾಖೆ.
೪.ಸರ್ಕಾರದ ಕಾರ್ಯದರ್ಶಿಗಳು (ವಿ.ಸಿ/ನೋಂ&ಮು) ಇವರ ಆಪ್ತ ಸಹಾಯಕರಿಗೆ ಕಂದಾಯ ಇಲಾಖೆ.
೫.ಸರ್ಕಾರದ ಅಧೀನ ಕಾರ್ಯದರ್ಶಿ ಸಿ.ಆ.ಸು.ಇಲಾಖೆ(ರಾಜ್ಯ ಶಿಷ್ಟಾಚಾರ)
೬..ಎಲ್ಲಾ ಉಪ ಕಾರ್ಯದರ್ಶಿಗಳು/ಎಲ್ಲಾ ಅಧೀನ ಕಾರ್ಯದರ್ಶಿಗಳು ಕಂದಾಯ ಇಲಾಖೆ.
೭.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.